ಮೊಳಕಾಲ್ಮೂರು ಕ್ಷೇತ್ರದಲ್ಲಿ ಬಸ್ಸುಗಳ ಸೌಲಭ್ಯ

ಶಿಳಿ (೧೫೬೫) ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವವರೇ:—

ಅ) ಚಿತ್ರದುರ್ಗ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಸಾರಿಗೆ ಸೌಲಭ್ಯದ ಕೊರತೆಯಿಂದಾಗಿ ಪ್ರಯಾಣಿಕರಿಗೆ ಉಂಟಾಗುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಪ್ರಯಾಣಿಕರಿಗೆ ತೊಂದರೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಇ) ಈಗ ಮೊಳಕಾಲ್ಮೂರು ಕ್ಷೇತ್ರದಲ್ಲಿ ಕೆಲವು ಹೊರಗಡೆ ಇರುವ ಹಳ್ಳಿಗಳಿಗೆ ಬಸ್ಸಿನ ಸೌಕರ್ಯ ಇಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಹೌದು. ಚಿತ್ರದುರ್ಗ ಜಿಲ್ಲೆಯಾದ್ಯಂತ ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲು ಕೋರಿ ಅಂತ ಬೇಡಿಕೆಗಳು ಬಂದಿರುತ್ತವೆ.

ಆ) ೧೯೮೯-೯೦ನೇ ಸಾಲಿನಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಚಿತ್ರದುರ್ಗ ಇವರು ಚಿತ್ರದುರ್ಗ ಜಿಲ್ಲೆಯಾದ್ಯಂತ ಹಳ್ಳಿಗಳಿಂದ ತಾಲ್ಲೂಕುಗಳಿಗೆ ಮತ್ತು ಜಿಲ್ಲಾ ಕೇಂದ್ರ ಸ್ಥಾನಕ್ಕೂ ಸಂಪರ್ಕವನ್ನು ಕಲ್ಪಿಸಿ ೫೬ ಹೊಸ ಮಾರ್ಗಗಳಲ್ಲಿ ಹೊಸ ಬಸ್ಸುಗಳಿಗೆ ಪರವಾನಿಗೆಗಳನ್ನು ನೀಡಿರುತ್ತಾರೆ. ಬಾಕಿ ಉಳಿದಿರುವ ಬೇಡಿಕೆಗಳನ್ನು ಮಂಜೂರು ಮಾಡುವ ಪರ್ಮಿಟ್ ಅರ್ಜಿಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಖಾಸಗಿ ಮಾಲೀಕರುಗಳಿಗೆ ಸೇರಿದ್ದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದೆ ಪರಿಶೀಲನೆಯಲ್ಲಿರುತ್ತವೆ. ಚಿತ್ರದುರ್ಗ ಜಿಲ್ಲೆಯಾದ್ಯಂತ ನಡೆಸಿದ ಸಾರಿಗೆ ಬೇಡಿಕೆ ಸಮೀಕ್ಷೆಯ ಪ್ರಕಾರ ಜಿಲ್ಲೆಯಾದ್ಯಂತ ಬಸ್ಸುಗಳನ್ನು ಓಡಿಸಲು ಹೊಸ ೮೩ ಮಾರ್ಗಗಳನ್ನು ಗುರುತಿಸಲಾಗಿದೆ. ಈ ಮಾರ್ಗಗಳಲ್ಲಿ ಹೊಸ ಬಸ್ಸು ಪರವಾನಿಗೆಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು.

ಇ) ಹೌದು. ಮೊಳಕಾಲ್ಮೂರು ಕ್ಷೇತ್ರಕ್ಕೆ ಸೇರಿದ ಕೊಂಡ್ಲಿಹಳ್ಳಿ ಮತ್ತು ನಾಗಸಮುದ್ರ ಮಂಡಲ ಪಂಚಾಯಿತಿಗಳಿಂದ ೨೬ ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲು ಕೋರಿ ಮನವಿಗಳು ಬಂದಿರುತ್ತವೆ.

ಈ) ಮೊಳಕಾಲ್ಮೂರು ಕ್ಷೇತ್ರದ ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸೌಲಭ್ಯಗಳನ್ನು ಕಲ್ಪಿಸಿ ಕೊಡುವ ಉದ್ದೇಶದಿಂದ ಚಿತ್ರದುರ್ಗದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಈಗಾಗಲೇ ನಾಲ್ಕು ಬಸ್ಸುಗಳನ್ನು ಓಡಿಸಲು ಪರವಾನಿಗೆಗಳನ್ನು ಮಂಜೂರು ಮಾಡಿದೆ. ಸಾರಿಗೆ ಇಲಾಖೆಯು ಇತ್ತೀಚೆಗೆ ಜಿಲ್ಲಾದ್ಯಂತ ನಡೆಸಿದ ಸಾರಿಗೆ ಬೇಡಿಕೆ ಸಮೀಕ್ಷೆಯ ಪ್ರಕಾರ ಮೊಳಕಾಲ್ಮೂರು ತಾಲ್ಲೂಕನ್ನು ಒಳಗೊಂಡಂತೆ ೮೩ ಹೊಸ ಬಸ್ಸಿನ ಮಾರ್ಗಗಳನ್ನು ಗುರುತಿಸಿ ಈ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸಲು ಪರವಾನಿಗೆಗಳನ್ನು ಮಂಜೂರು ಮಾಡುವ ಮೂಲಕ ಜಿಲ್ಲೆಯಾದ್ಯಂತ ಸಾರಿಗೆ ಬೇಡಿಕೆಯನ್ನು ಪೂರೈಸಬೇಕೆಂಬ ಉದ್ದೇಶವಿದೆ. ಸಾರಿಗೆ ಬೇಡಿಕೆಯನ್ನು ಮಂಜೂರು ಮಾಡಲು ಕೋರಿ ಬಂದ ಅನೇಕ ಅರ್ಜಿಗಳು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದೆ ಇದ್ದು ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ ಮತ್ತು ಖಾಸಗಿ ಮಾಲೀಕರುಗಳಿಗೆ ಪರವಾನಿಗೆಗಳನ್ನು ಮಂಜೂರು ಮಾಡುವ ವಿಷಯ ಪರಿಶೀಲನೆಯಲ್ಲಿದೆ.

ಶ್ರೀನಿವಾಸಪುರದಲ್ಲಿ ಮುನ್ಸಿಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ತೆರೆಯುವ ಬಗ್ಗೆ.

ಶಿಳಳ (೧೧೩೬) ಶ್ರೀ ಸಿ, ಕೆ. ವೆಂಕಟ ಶಿವರೆಡ್ಡಿ (ಶ್ರೀನಿವಾಸಪುರ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಶ್ರೀನಿವಾಸಪುರದಲ್ಲಿ ಮುನ್ಸಿಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವನ್ನು ಸ್ಥಾಪಿಸಲು ಸರ್ಕಾರವು ಪ್ರಸ್ತಾವನೆಯೇನಾದರೂ ಇದೆಯೇ ?

ಆ) ಹಾಗಿದ್ದಲ್ಲಿ, ಈ ನ್ಯಾಯಾಲಯವನ್ನು ತೆರೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮ (ತತ್‌ಕ್ಷಣ) ?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಧಾರವಾಡ ಜಿಲ್ಲಾ ಪರಿಷತ್ತಿನ ಅಧೀನದಲ್ಲಿರುವ ಎಲ್ಲಾ ರಸ್ತೆಗಳ ದುರಸ್ಥಿ

೨೪೧ (೮೫೭) ಶ್ರೀ ಕೆ. ಹೆಚ್. ಕಾರಡಗಿ (ಮುಂಡರಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಧಾರವಾಡ ಜಿಲ್ಲಾ ಪರಿಷತ್ತಿನ ಅಧೀನದಲ್ಲಿರುವ ಎಲ್ಲಾ ರಸ್ತೆಗಳು ದುರಸ್ಥಿಯಲ್ಲಿರುವುದು ಸರ್ಕಾರದಪರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇವುಗಳ ದುರಸ್ಥಿಗಾಗಿ ಯಾವ ಕ್ರಮತೆಗೆದುಕೊಳ್ಳಲಾಗಿದೆ ?

ಇ) ಲೋಕೋಪಯೋಗಿ ಇಲಾಖೆಯಿಂದ ಜಿಲ್ಲಾ ಪರಿಷತ್‌ಗೆ ವರ್ಗಾಯಿಸಿದ ರಸ್ತೆಗಳನ್ನು ಪುನಃ ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸುವ ಉದ್ದೇಶ ಇದೆಯೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ಧಾರವಾಡ ಜಿಲ್ಲಾ ಪರಿಷತ್‌ಗೆ ಪ್ರತಿ ವರ್ಷ ಬಿಡುಗಡೆಯಾದ ನಿರ್ವಹಣಾ ಅನುದಾನದಲ್ಲಿ ರಸ್ತೆಗಳ ದುರಸ್ತಿ ಕಾರ್ಯವನ್ನು ನಿರ್ವಹಿಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) (೧) ೧೯೮೯-೯೦ನೇ ಸಾಲಿನಲ್ಲಿ ನಿರ್ವಹಣಾ ಅನುದಾನ ಮೆಚ್ಚ ಈ ಕೆಳಗಿನಂತಿದೆ.—

	ವಿಭಾಗ	ಅನುದಾನ (ಲಕ್ಷ ರೂ.)	ಮೆಚ್ಚ (ಲಕ್ಷ ರೂ.)
೧)	ಧಾರವಾಡ	೩೪.೮೯	೪೪.೫೫
೨)	ಗದಗ್	೫೪.೮೯೦	೫೨.೬೪
೩)	ಹಾವೇರಿ	೫೦.೩೦೬	೬೯.೪೩
		೧೪೯.೦೯೩	೧೬೬.೬೨

(೨) ೧೯೯೦-೯೧ನೇ ಸಾಲಿಗೆ ಧಾರವಾಡ ಜಿಲ್ಲಾ ಪರಿಷತ್ತಿಗೆ ೧೪೯.೩೦ ಲಕ್ಷ ರೂ.ಗಳ ನಿರ್ವಹಣಾ ಅನುದಾನವನ್ನು ನೀಡಲಾಗಿದೆ.

ಇ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿನ ಕೆಲವು ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ. ಹೆಚ್. ಪಾಟೀಲ್ (ಮಾನ್ಯ ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ದಿನಾಂಕ ೧೨.೭.೯೦ನೇ ದಿವಸದ ಲಿಖಿತ ಮೂಲಕ ಉತ್ತರಿಸಲಾದ ೨೮ನೇ ಪಟ್ಟಿಯಲ್ಲಿರುವ ೬೫ ಪ್ರಶ್ನೆಗಳ ಪೈಕಿ ಪ್ರಶ್ನೆ ೧೪೫೮, ೧೪೦೭, ೧೧೭೨, ೧೫೨೫ ಬಿ ಹಾಗೂ ೧೫೮೧ ಪ್ರಶ್ನೆಗಳ ಹೊರತು ಮತ್ತು ಉಳಿದೆಲ್ಲ ೬೦ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ